**Date: 16/12/2023**

**PRESS RELEASE - GOLDEN JUBILEE CELEBRATION OF KARNATAKA RAJYOTSAVA**

The Golden Jubilee celebrations of Karnataka Rajyotsava was held with great enthusiasm at the Head Office of Canara Bank, Bengaluru. The MD & CEO of the Bank, Shri K. Sathyanarayana Raju along with the Executive Directors, had attended the meeting. Shri K. Sathyanarayana Raju has praised the expansive culture of Kannadigas and highlighted Karnataka's and Bengaluru's contributions to the nation's progress. Shri K. Sathyanarayana Raju emphasized the importance of promoting the Kannada language and culture.

Dr. Aarthi V.B., a renowned scholar, writer, and personality development expert, addressed the gathering as the chief guest. She spoke about the need to blend regional identity with Indian values and emphasized the significance of contributions to art and culture in preserving India's heritage.

The event also acknowledged Canara Bank's efforts in contributing to India's rapid economic growth. Cultural programs organized by Canara Bank added vibrancy to the event. The ceremony included the distribution of awards and certificates to winners of various competitions.

ಬೆಂಗಳೂರಿನ ಕೆನರಾ ಬ್ಯಾಂಕ್ ಪ್ರಧಾನ ಕಾರ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವ ಸುವರ್ಣ ಸಂಭ್ರಮದ ಆಚರಣೆಯನ್ನು ಬಹಳ ಅದ್ದೂರಿಯಿಂದ ಆಚರಿಸಲಾಯಿತು. ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯೂ (MD&CEO) ಆಗಿರುವ ಶ್ರೀಯುತ ಕೆ. ಸತ್ಯನಾರಾಯಣ ರಾಜುರವರು ಅಧ್ಯಕ್ಷತೆ ವಹಿಸಿದ್ದರು. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ರಾಜುರವರು ಕನ್ನಡಿಗರ ಹೃದಯ ವೈಶಾಲ್ಯವನ್ನ ಪ್ರಶಂಸಿಸುತ್ತ, ದೇಶದ ಪ್ರಗತಿಯಲ್ಲಿ ಕರ್ನಾಟಕದ, ಅದರಲ್ಲೂ ಬೆಂಗಳೂರು ನಗರದ ಕೊಡುಗೆಯನ್ನು ಉಲ್ಲೇಖಿಸಿದರು. ಕೆನರಾ ಬ್ಯಾಂಕ್ ತನ್ನ ಮುಖ್ಯ ಕಾರ್ಯಾಲಯವನ್ನು ಬೆಂಗಳೂರಿನಲ್ಲಿ ಹೊಂದಿದ್ದು, ಕನ್ನಡೇತರರಿಗೆ ಕನ್ನಡ ಭಾಷೆಯನ್ನು ಕಲಿಯಲು ಅನುಕೂಲವಾಗುವಂತೆ ಹಲವಾರು ಚಟುವಟಿಕೆಗಳನ್ನು ಆಯೋಜಿಸಿರುವುದಾಗಿ ಈ ಸಂದರ್ಭದಲ್ಲಿ ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹೆಸರಾಂತ ವಾಗ್ಮಿ, ಸಾಹಿತಿ, ವ್ಯಕ್ತಿತ್ವ ವಿಕಸನದ ತಜ್ಞೆ ಶ್ರೀಮತಿ ಡಾ. ಆರತಿ ವಿ.ಬಿ. ಯವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಪ್ರಾದೇಶಿಕತೆಯ ಜೊತೆಗೆ ಭಾರತೀಯತೆಯನ್ನು ಜೊತೆ ಜೊತೆಗೇ ಬೆಳೆಸಿಕೊಳ್ಳಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದರು. ಹಿಂದಿನ ಕನ್ನಡ ರಾಜಮನೆತನಗಳು ಈಗಿರುವ ಕನ್ನಡ ನಾಡಿನ ಗಡಿಯಾಚೆಗೂ ವಿಸ್ತಾರಗೊಂಡಿದ್ದವಷ್ಟೇ ಅಲ್ಲದೆ ಕಲೆ, ಸಂಸ್ಕೃತಿಯ ಕೊಡುಗೆಗಳ ಮೂಲಕ ಭಾರತದಾದ್ಯಂತ ತಮ್ಮ ಅಸ್ಮಿತೆಯನ್ನು ಇಂದಿಗೂ ಉಳಿಸಿ ಹೋಗಿವೆ ಎಂದು ದೃಷ್ಟಾಂತಗಳ ಮೂಲಕ ಸಾದರ ಪಡಿಸಿದರು. ಇಂದು ಭಾರತ ದೇಶವು ಅತ್ಯಂತ ಕ್ಷಿಪ್ರಗತಿಯಲ್ಲಿ ಬೃಹತ್ ಆರ್ಥಿಕ ಶಕ್ತಿಯಾಗಿ ಹೆಜ್ಜೆ ಹಾಕುತ್ತಿದ್ದು, ಇದರಲ್ಲಿ ಕೆನರಾ ಬ್ಯಾಂಕ್‌ನ ಯೋಗದಾನವನ್ನು ಉಲ್ಲೇಖಿಸಿದರು. ಕ್ಷೇತ್ರ ಯಾವುದೇ ಇರಲಿ ನಾವೆಲ್ಲರೂ ರಾಷ್ಟ್ರ ನಿರ್ಮಾಣದಲ್ಲಿ ಪಾಲ್ಗೊಂಡು ಭಾರತೀಯತೆಯನ್ನು ವಿಶ್ವಮಟ್ಟದಲ್ಲಿ ಪ್ರಚುರಪಡಿಸಬೇಕೆಂದು ಕರೆ ನೀಡಿದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು. ಕಾರ್ಯನಿವಾರ್ವಹಕ ನಿರ್ದೇಶಕರುಗಳಾದ ಶ್ರೀಯುತ ದೇಬಾಶಿಶ್ ಮುಖರ್ಜಿ, ಅಶೋಕ ಚಂದ್ರ ಮತ್ತು ಭವೇಂದ್ರ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮುಖ್ಯ ಮಹಾ ಪ್ರಬಂಧಕರಾದ ಶ್ರೀಯುತ ಕೆ.ಜೆ. ಶ್ರೀಕಾಂತರವರು ಸ್ವಾಗತ ಕೋರಿದರು. ಕೆನರಾ ಬ್ಯಾಂಕ್ ಸಿಬ್ಬಂದಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟು ಸಭಿಕರನ್ನು ರಂಜಿಸಿದರು. ಶ್ರೀಮತಿ ಶ್ರೀವಿದ್ಯಾರವರು ಅಚ್ಚುಕಟ್ಟಾಗಿ ನಿರೂಪಣೆ ಮಾಡಿದರು. ಮಹಾಪ್ರಬಂಧಕರಾದ ಶ್ರೀಯುತ ರಾಮನಾಯ್ಕರವರು ವಂದನಾರ್ಪಣೆ ಸಲ್ಲಿಸಿದರು.